ಜಲಾನಯನ ಅಭಿವೃದ್ಧಿ ಇಲಾಖೆಯ ಆಯಾ ಘಟಕಗಳ ಕಾಮಗಾರಿಗಳ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಕೈಗೊಳ್ಳುತ್ತಿದ್ದಾರೆ. ಇವರುಗಳ ಕೇಂದ್ರಸ್ಥಾನ ತಾಲ್ಲೂಕು ಕೇಂದ್ರವಾಗಿರುತ್ತದೆ. ಇವರುಗಳಿಗೆ ಸಾಕಷ್ಟು ಕೆಲಸಗಳಿವೆ.

ನಮೂನೆ –1

2001-02 ಮತ್ತು 2002 ನೇ ಸಾಲಿಗೆ ಜಲಾನಯನ ಅಭಿವೃದ್ಧಿ ಇಲಾಖೆಗೆ ನೀಡಲಾದ ಹಣದ ವಿವರ

(ಹಣ ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಯೋಜನೆಯ ಹೆಸರು	2001–02ನೇ ಸಾಲಿಗೆ ನೀಡಲಾದ ಹಣ	2002–03ನೇ ಸಾಲಿಗೆ ನೀಡಲಾದ ಹಣ
	ಕೇಂದ್ರ ಪುರಸ್ಕೃತ ಯೋಜನೆ		
1.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	1917.43	891.01
2.	ನದಿ ಕಣಿವೆ ಯೋಜನೆ	970.718	1557.24
3.	ಉಪ್ಪು ಮತ್ತು ಕ್ಷಾರೀಯ ನೀರು ಆವೃತ ಪ್ರದೇಶಾಭಿವೃದ್ಧಿ	0.00	149.00
	ಕೇಂದ್ರ ಪುರಸ್ಕೃತ ಯೋಜನೆಯ ಒಟ್ಟು	2888.15	2597.25
	ರಾಜ್ಯ ವಲಯ		
4.	ಜಲಾನಯನ ಅಭಿವೃದ್ಧಿ ಇಲಾಖೆ ಸಿಬ್ಬಂದಿ		
	ಅ) ಯೋಜನೆ	966.81	94.00
	ಆ) ಯೋಜನೇತರ	53.21	57.74
5.	ಜಲಾನಯನ ತರಬೇತಿ ಕೇಂದ್ರ		
	ಅ) ಯೋಜನೆ	0.00	4.00
	ಆ) ಯೋಜನೇತರ	46.88	55.65
	ರಾಜ್ಯ ವಲಯ ಒಟ್ಟು	1066.90	211.39
	ಹೊರ ನೆರವಿನ ಯೋಜನೆ		
6.	ಸುಜಲ ಜಲಾನಯನ ಯೋಜನೆ	129.88	882.40
7.	ನಬಾರ್ಡ್	0.00	101.54
8.	ಕಕವಾಡ	500.0	500.00
	ಹೊರ ನೆರವಿನ ಯೋಜನೆಯ ಒಟ್ಟು	629.88	1483.94
	ಒಟ್ಟು ಮೊತ್ತ	4584.93	4292.58

ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ

4231 (4229) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಕೈಗೊಂಡ ಕ್ರಮಗಳು :-

1) ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕ ಮಾಡಿದೆ.

2) ಬ್ಯಾಂಕಿನ ಸಾಲ ವಸೂಲಾತಿಯು ಬಹಳ ಕಡಿಮೆಯಾಗಿದ್ದು ಠೇವಣಿದಾರರಿಗೆ ಠೇವಣಿ ವಾಪಸ್ಸು ಮಾಡಲು ಕೊರತೆ ಉಂಟಾಗಿದ್ದು ಸರ್ಕಾರದ ಹಾಗೂ ಅಪೆಕ್ಸ್ ಬ್ಯಾಂಕಿನ ಪ್ರಯತ್ನದ ಫಲವಾಗಿ ಬ್ಯಾಂಕು ರೂ. 41.37 ಕೋಟಿ ಸಂಪನ್ಮೂಲಗಳನ್ನು ಸಂಗ್ರಹಿಸಿದೆ.

3) 1999-2000ನ ಸಾಲಿನಲ್ಲಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲಾಗಿತ್ತು. ಇದರ ಬಾಬ್ತು ನಬಾರ್ಡಿನಿಂದ ಪುನರ್‌ಧನ ರೂ. 19.10 ಕೋಟಿಯನ್ನು ಪಡೆಯಲು ಸರ್ಕಾರ ರೂ. 6.84 ಕೋಟಿಯನ್ನು ದಿನಾಂಕ: 11.4.2002 ರಂದು ಮಂಜೂರು ಮಾಡಿದ್ದು ಈಗಾಗಲೇ ಅಪೆಕ್ಸ್ ಬ್ಯಾಂಕಿಗೆ ಈ ಹಣವನ್ನು ಬಿಡುಗಡೆ ಮಾಡಲಾಗಿದೆ.

4. ನಬಾರ್ಡಿನ "ಏಕ ಕಾಲಿಕ" ಸಾಲ ತೀರುವಳಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬ್ಯಾಂಕಿಗೆ ಅನುಮತಿಯನ್ನು ನೀಡಲಾಗಿದೆ.

5. ಬ್ಯಾಂಕು ಬಿ.ಆರ್. ಆಕ್ಟ್ ಕಲಂ 11(1) ರಿಂದ ಹೊರಬರಲು ಹಾಗೂ ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ವಿನಾಯ್ತಿ ನೀಡಲು ಆರ್.ಬಿ.ಐ.ಗೆ ಶಿಫಾರಸ್ಸು ಮಾಡಿದೆ.

6. ಲಾಭ ಗಳಿಸಿದ ಆಸ್ತಿಗಳನ್ನು ನಬಾರ್ಡ್‌ನ ಓ.ಟಿ.ಎಸ್. ಯೋಜನೆಯಡಿಯಲ್ಲಿ ಶೇ 816 ರ ಬಡ್ಡಿ ದರದಲ್ಲಿ ವಸೂಲಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

7. ಪುನಶ್ಚೇತನ ಕೆಲಸಗಳನ್ನು ತ್ವರಿತಗೊಳಿಸಲು ಹಾಗೂ ಸೂಕ್ತ ಸಲಹೆ ನೀಡಲು ಸಲಹಾ ಸಮಿತಿಯನ್ನು ರಚಿಸಲಾಗಿದೆ.

8. ಪಟ್ಟಣ ಬ್ಯಾಂಕುಗಳು ರೂ. 161.46 ಕೋಟಿ ಠೇವಣಿಯನ್ನು ಹೊಂದಿದ್ದು ಆರ್.ಬಿ.ಐ ಸೂಚನೆ ಪ್ರಕಾರ ನೆಟ್ ಡಿಮ್ಯಾಂಡ್ ಅಂಡ್ ವೈರಿ ಲಯಬಲಿಟಿಯ ಶೇ.11 ರಿಂದ 15 ರಷ್ಟನ್ನು ಸರಕಾರದ ಭದ್ರತೆಯಲ್ಲಿ ತೊಡಗಿಸಬೇಕಾಗಿದ್ದು ಇದಕ್ಕೆ ಕೆ.ಸಿ.ಸಿ. ಬ್ಯಾಂಕಿನಿಂದ ಠೇವಣಿಯನ್ನು ವಾಸ್ಸು ಪಡೆದಲ್ಲಿ ಅದಕ್ಕೆ ಇನ್ನೂ ಹೆಚ್ಚಿನ ಆರ್ಥಿಕ ಮುಗ್ಗಟ್ಟು ಆಗುತ್ತದೆಂಬ ಕಾರಣದಿಂದ ಒಂದು ವರ್ಷದ ಅವಧಿಗೆ ವಿನಾಯ್ತಿ ಕೋರಲಾಗಿದೆ.

9. ಎಲ್ಲಾ ಸುಸ್ತಿ ಸಾಲಗಳನ್ನು ವಸೂಲಿ ಮಾಡಲು ಕಾನೂನು ರೀತ್ಯಾ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

10. ಅಪೆಕ್ಸ್ ಬ್ಯಾಂಕಿನಿಂದ ಅಲ್ಪಾವಧಿ ಪತ್ತಿನ ಮಿತಿ ರೂ. 75.00 ಕೋಟಿಯನ್ನು ಮಂಜೂರು ಮಾಡಲಾಗಿದೆ.

11. ಸಾಲದ ಅಂತರ ಯೋಜನೆಯಡಿಯಲ್ಲಿ ದಿನಾಂಕ 31.3.2002 ರ ವರೆಗೆ ಸರ್ಕಾರವು ರೂ. 516.07 ಲಕ್ಷಗಳನ್ನು ತನ್ನ ಪಾಲಾಗಿ ನೀಡಿದೆ. ಇದರಲ್ಲಿ ಧಾರವಾಡ ಕೆ.ಸಿ.ಸಿ. ಬ್ಯಾಂಕಿಗೆ ರೂ. 103.79 ಲಕ್ಷ ನೀಡಲಾಗಿದೆ.